# ಶ್ರೀಕೃಷ್ಣ



**ಪ್ರೇಮೋನ್ಮಾದ** ಉಂಟಾದರೆ ಸರ್ವಭೂತಗಳಲ್ಲಿಯೂ ಭಗವಂತನನ್ನು ನೋಡಬಹುದು. ಗೋಪಿಯರು ಸರ್ವ ಭೂತಗಳಲ್ಲಿಯೂ ಶ್ರೀಕೃಷ್ಣ ಇರುವುದನ್ನು ಕಂಡಿದ್ದರು; ಎಲ್ಲವೂ ಅವರಿಗೆ ಕೃಷ್ಣನಾಗಿ ಕಂಡಿತು. ಅವರು ಆಗ ಹೇಳುತ್ತಿದ್ದರು, ತಾವೇ ಕೃಷ್ಣ ಅಂತ.ಆಗ ಅವರದು ಪ್ರೇಮೋನ್ಮಾದ. ಮರ ನೋಡಿ ಅವರು ಹೇಳುತ್ತಿದ್ದರು, 'ಇವರು ತಪಸ್ವಿಗಳು; ಶ್ರೀಕೃಷ್ಣನ ಧ್ಯಾನ ಮಾಡುತ್ತಿದ್ದಾರೆ' ಅಂತ. ನೆಲದ ಮೇಲೆ ಬೆಳೆದಿರೋ ಹುಲ್ಲುನೋಡಿ ಅವರು ಹೇಳುತ್ತಿದ್ದರು, 'ನೋಡಿ, ಶ್ರೀಕೃಷ್ಣನನ್ನು ಸ್ಪರ್ಶಿಸಿ ಪೃಥಿವಿಗೆ ರೋಮಾಂಚನವಾಗಿಬಿಟ್ಟಿದೆ' ಅಂತ.

ಆಹಾ, ಗೋಪಿಯರದು ಎಂತಹ ಅನುರಾಗ! ತಮಾಲ ವೃಕ್ಷ ನೋಡಿದೊಡನೆಯೆ ಒಮ್ಮೆಗೇ ಪ್ರೇಮೋನ್ಮಾದ! ರಾಧೆಯ ವಿರಹಾಗ್ನಿ ಅಷ್ಟು ಉಜ್ಜ್ವಲವಾದ್ದು. ಕಣ್ಣಿನಿಂದ ನೀರು ಸ್ರವಿಸಿದೊಡನೆಯೆ ಅದು ಇಂಗಿಹೋಗುತ್ತಿತ್ತು. ನೀರು ಸ್ರವಿಸುವುದೇ ತಡ, ಅದು ಆವಿಯಾಗಿ ಹೊರಟುಹೋಗುತ್ತಿತ್ತು! ಕೆಲ ಕೆಲವು ಸಮಯ ಆಕೆಯ ಭಾವ ಎಷ್ಟು ಗಂಭೀರವಾದುದು ಎಂಬುದು ಗೊತ್ತೇ ಆಗುತ್ತಿರಲಿಲ್ಲ. ವಿಶಾಲವಾದ ಸರೋವರಕ್ಕೆ ಆನೆ ಇಳಿದರೆ, ಅದು ಜನರ ಗಮನಕ್ಕೇ ಬರುವುದಿಲ್ಲ.

ರಾಧೆಯದು ಕೇವಲ ನೂರಕ್ಕೆ ನೂರು ಭಾಗವಲ್ಲ, ನೂರಕ್ಕೆ ನೂರಿಪ್ಪತ್ತೈದು ಭಾಗ ಅನುರಾಗ! ಇದಕ್ಕೆ ಪ್ರೇಮೋನ್ಮಾದ ಅಂತ ಹೆಸರು.

ಗೋಪಿಯರ ವಸ್ತ್ರಾಪಹರಣದ ಇಂಗಿತವೇನೆಂದರೆ, ಅವರು ಅಷ್ಟಪಾಶಗಳಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದರು—ಕೇವಲ ಲಜ್ಜೆಯನ್ನು ವಿನಾ. ಅದಕ್ಕಾಗಿಯೇ ಶ್ರೀಕೃಷ್ಣ ಅವರ ವಸ್ತ್ರವನ್ನು ಅಪಹರಿಸಿ ಆ ಪಾಶದಿಂದಲೂ ಅವರನ್ನು ಮುಕ್ತರನ್ನಾಗಿ ಮಾಡಿದ.

ಯಶೋದೆ ಕೃಷ್ಣವಿರಹ ತಾಳಲಾರದೆ ರಾಧೆಯ ಹತ್ತಿರಕ್ಕೆ ಹೋದಳು. ಆಕೆಯ ಕಷ್ಟವನ್ನು ಮನಗಂಡು ರಾಧೆ ತನ್ನ ನಿಜಸ್ವರೂಪವನ್ನು ತೋರಿಸಿದಳು. ಆಕೆ ಯಶೋದೆಗೆ ಹೇಳಿದಳು: 'ಕೃಷ್ಣ ಚಿದಾತ್ಮ, ನಾನು ಚಿಚ್ಛಕ್ತಿ, ನನ್ನಿಂದ ಒಂದು ವರ ಬೇಡಿಕೊ.' ಯಶೋದೆ ಹೇಳಿದಳು: 'ನನಗೆ ಬ್ರಹ್ಮಜ್ಞಾನ ಬೇಕಾಗಿಲ್ಲ. ನನಗೀ ವರ ಕೊಡು— ಧ್ಯಾನದ ಸಮಯದಲ್ಲಿ ಗೋಪಾಲನ ರೂಪವನ್ನು ಸರ್ವದಾ ನೋಡುವ ಹಾಗೆ; ಕೃಷ್ಣ-ಭಕ್ತ ಸಂಗ ಸರ್ವದಾ ದೊರೆಯುವ ಹಾಗೆ; ಭಕ್ತರ ಸೇವೆಯನ್ನು ಮಾಡಲು ಸಾಧ್ಯವಾಗುವ ಹಾಗೆ; ಆತನ ನಾಮಗುಣ ಕೀರ್ತನೆಯನ್ನು ಸತತ ಮಾಡಲಾಗುವ ಹಾಗೆ.'

ಯಶೋದೆ ಕೃಷ್ಣನನ್ನು ಹಗ್ಗದಿಂದ ಕಟ್ಟಿಹಾಕಲು ಪ್ರಯತ್ನಿಸಿದಳು. ಆಕೆ ನಂಬಿದ್ದಳು, ತಾನಲ್ಲದೆ ಬೇರೆ ಯಾರೂ ಕೃಷ್ಣನ ಯೋಗಕ್ಷೇಮ ನೋಡಿಕೊಳ್ಳಲಾರರು ಎಂದು.

ಮಥುರೆಗೆ ಹೋಗುವ ಮುನ್ನ ಕೃಷ್ಣ ಮನಸ್ಸು ಮಾಡಿಕೊಂಡಿದ್ದ, ಗೋಪಿಯರಿಗೆ ಬ್ರಹ್ಮಜ್ಞಾನ ಕೊಟ್ಟು ಹೋಗಬೇಕೆಂದು. ಆತ ಅವರಿಗೆ ಹೇಳಿದ: 'ನಾನು ಎಲ್ಲಾ ಭೂತಗಳ ಒಳಗೂ ಹೊರಗೂ ಇದ್ದೇನೆ. ನೀವು ನನ್ನನ್ನು ಈ ಒಂದು ರೂಪದಲ್ಲಿ ಮಾತ್ರವೇ ಏಕೆ ನೋಡುತ್ತಿರಬೇಕು?' ಗೋಪಿಯರೆಲ್ಲರೂ ಒಕ್ಕೊರಲಿನಿಂದ ಕೂಗಿಕೊಳ್ಳಲಾರಂಭಿಸಿದರು: 'ಓ ಕೃಷ್ಣ, ನಮ್ಮನ್ನು ಬಿಟ್ಟು ಹೊರಟು ಹೋಗಬೇಕು ಅಂತ ಇದ್ದೀಯೇನು? ಅದಕ್ಕಾಗೇನು ಈ ಬ್ರಹ್ಮಜ್ಞಾನೋಪದೇಶ?'

ಒಮ್ಮೆ ಪರಮಹಂಸರು ಮಥುರಬಾಬುವಿನೊಡನೆ ಬೃಂದಾವನಕ್ಕೆ ಹೋಗಿದ್ದರು. ಹೃದಯನೂ ಹೋಗಿದ್ದ. ಕಾಲೀಯ ದಮನ ಘಟ್ಟವನ್ನು ನೋಡಿದೊಡನೆಯೇ ಪರಮಹಂಸರಿಗೆ ಉದ್ದೀಪನವುಂಟಾಗಿ ಬಿಡುತ್ತಿತ್ತು. ಸಂಪೂರ್ಣಭಾವಪರವಶರಾಗಿ ಬಿಡುತ್ತಿದ್ದರು. ಹೃದು ಮಕ್ಕಳನ್ನು ಹಿಡಿದು ಸ್ನಾನ ಮಾಡಿಸುವ ರೀತಿಯಲ್ಲಿ ಪರಮಹಂಸರಿಗೆ ಅಲ್ಲಿ ಸ್ನಾನಮಾಡಿಸುತ್ತಿದ್ದ. ಸಾಯಂಕಾಲದ ವೇಳೆ ತಿರುಗಾಡಿಕೊಂಡು ಬರಲು ಯಮುನಾ ದಡಕ್ಕೆ ಹೋಗಿಬರುತ್ತಿದ್ದರು. ದನಕರುಗಳು ಹುಲ್ಲುಗಾವಲಿನಿಂದ ಹಿಂದಿರುಗಿ ಬಂದಾಗ ಯಮುನೆಯ ಮರಳುಗುಡ್ಡೆಗಳ ಮೂಲಕ ಹಾದುಬರುತ್ತಿದ್ದವು. ಅವು ಕಣ್ಣಿಗೆ ಬಿದ್ದೊಡನೆಯೆ ಪರಮಹಂಸರಿಗೆ ಕೃಷ್ಣನ ಉದ್ದೀಪನವಾಗಿಬಿಡುತ್ತಿತ್ತು. 'ಕೃಷ್ಣ ಎಲ್ಲಿ? ನನ್ನ ಕೃಷ್ಣ ಎಲ್ಲಿ?' ಎಂದು ಹುಚ್ಚನ ಹಾಗೆ ಕೂಗಿಕೊಳ್ಳುತ್ತಾ ಅವುಗಳ ಹಿಂದೆ ಓಡುತ್ತಿದ್ದರು.

ಪರಮಹಂಸರು ಪಲ್ಲಕ್ಕಿಯಲ್ಲಿ ಕುಳಿತು ಶ್ಯಾಮಕುಂಡ ರಾಧಾಕುಂಡಗಳಿಗೆ ಹೋಗುತ್ತಿದ್ದಾಗ ಗೋವರ್ಧನವನ್ನು ನೋಡಬೇಕೆಂದು ಕೆಳಕ್ಕೆ ಇಳಿದರು. ಗೋವರ್ಧನ ಪರ್ವತ ಕಣ್ಣಿಗೆ ಬಿದ್ದೊಡನೆಯೆ ಸಂಪೂರ್ಣ ಭಗವದುನ್ಮತ್ತರಾಗಿ ನೇರವಾಗಿ ಓಡಿಹೋಗಿ ಬಿಟ್ಟು ಪರ್ವತದ ಮೇಲೆ ಹತ್ತಿ ನಿಂತುಕೊಂಡು ಬಾಹ್ಯಶೂನ್ಯರಾಗಿಬಿಟ್ಟರು. ಆಗ ವ್ರಜವಾಸಿಗಳು ಅಲ್ಲಿಗೆ ಬಂದು ಪರಮಹಂಸರನ್ನು ಕೆಳಕ್ಕೆ ಇಳಿಸಿಕೊಂಡು ಬಂದರು. ಶ್ಯಾಮಕುಂಡ ರಾಧಾಕುಂಡಗಳ ಮಾರ್ಗದಲ್ಲಿದ್ದ ಹುಲ್ಲುಗಾವಲು, ಮರಗಿಡಗಳು, ಹಕ್ಕಿಗಳು, ಜಿಂಕೆಗಳು ಇವನ್ನೆಲ್ಲ ನೋಡಿ ಪರಮಹಂಸರಿಗೆ ಭಗವದುದ್ದೀಪನವಾಗಿಬಿಟ್ಟಿತು.

—*ಶ್ರೀರಾಮಕೃಷ್ಣ ವಚನವೇದ* ದಿಂದ